# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2009 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) |
| ವಿಷಯ | : | ಬೀದರ್ ಜಿಲ್ಲೆಯ ಕೋಟೆಯನ್ನು ಅಭಿವೃದ್ಧಿಪಡಿಸುವ ಕುರಿತು. |
| ಉತ್ತರಿಸುವ ದಿನಾಂಕ | : | 27.03.2020 |
| ಉತ್ತರಿಸುವ ಸಚಿವರು | : | ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಕೋಟೆಯನ್ನು ಅಭಿವೃದ್ಧಿ ಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | 2016-17ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಬೀದರ್ ಜಿಲ್ಲೆಯ ಪ್ರವಾಸಿ ತಾಣಗಳನ್ನು ರೂ.10.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಮಾದರಿ ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ.<br><br>ಸದರಿ ಘೋಷಣೆಯನ್ವಯ ಬೀದರ್ ಜಿಲ್ಲೆಯಲ್ಲಿರುವ ಬೀದರ್ ಕೋಟೆಯನ್ನು ರೂ.200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ದಿನಾಂಕ:23.04.2016ರ ಆದೇಶದಲ್ಲಿ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ.<br><br>ಬೀದರ್ ಕೋಟೆಯು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಸರ್ಕಾರವು ನೀಡಿರುವ ತಾತ್ವಿಕ ಅನುಮೋದನೆಯಂತೆ ರೂ.200.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ದಿನಾಂಕ:16.05.2017 ಮತ್ತು 04.11.2017ರ ಪತ್ರಗಳಲ್ಲಿ ಕೋರಲಾಗಿತ್ತು. ಆದರೆ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅಂದಾಜು ಪಟ್ಟಿ ಸಲ್ಲಿಸಿಲ್ಲದಿರುವುದರಿಂದ, ಸದರಿ ಕಾಮಗಾರಿಯನ್ನು ದಿನಾಂಕ:20.07.2019ರ ಆದೇಶದಲ್ಲಿ ರದ್ದುಪಡಿಸಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ಕೋಟೆಯ ನಿರ್ವಹಣೆಯ ರೂಪುರೇಷೆಗಳೇನು; ಟೆಂಡರ್ ಪ್ರಕಾರ ಈ ಕೋಟೆಯ ಅಳತೆ ಎಷ್ಟು; ಟೆಂಡರ್ ದರಗಳ ಸಂಪೂರ್ಣ ವಿವರ ನೀಡುವುದು; | ಅನ್ವಯಿಸುವುದಿಲ್ಲ |
| ಇ) | ಈ ಕೋಟೆ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಯಾವ ಯಾವ ಲೆಕ್ಕಶೀರ್ಷಿಕೆಗಳಡಿಯಲ್ಲಿ ಎಷ್ಟೆಷ್ಟು ಅನುದಾನ ಮಂಜೂರಾಗಿದೆ; ಖರ್ಚಾದ ಹಣ ಹಾಗೂ ಉಳಿಕೆಯಾಗಿರುವ ಹಣ ಎಷ್ಟು; | |
| ಈ) | ಬೀದರ್ ಕೋಟೆ ಅಭಿವೃದ್ಧಿಗೆ ಇನ್ನೂ ಬೇಕಾಗಿರುವ ಹಣವೆಷ್ಟು; ಹಣ ಬಿಡುಗಡೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು; ಬಿಡುಗಡೆಗೊಳಿಸುವುದು ಯಾವಾಗ: (ವಿವರ ನೀಡುವುದು) | |

ಕಡತ ಸಂಖ್ಯೆ: ಟಿಓಆರ್ 125 ಟಿಡಿವಿ 2020

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.